ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 03-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಬೋರ್ವೆಲ್ ತೆಗೆಸಿದ ಬಗ್ಗೆ ಸಾಕ್ಷಿಗೆ ದಾಖಲೆಯನ್ನು ತೋರಿಸಿದಾಗ ಸಾಕ್ಷಿ ನೋಡಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ಬೋರ್ವೆಲ್ ನಾವು ಖರೀದಿಸುವಾಗಲೇ ಇತ್ತು. ಪಂಪಸೆಟ್ ಬಗ್ಗೆ ಸಾಕ್ಷಿ Tax Invoice ತೋರಿಸಲಾಗಿ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು 2020 ರವರೆಗೆ ಹೊಸದಾಗಿ ಯಾವುದೇ ಬೋರ್ವೆಲ್ ಇರಲಿಲ್ಲ ನಾವು ಖರೀದಿ ಮಾಡುವಾಗಲೇ ಒಂದು ಬೋರ್ವೆಲ್ ಇತ್ತು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ Jain wire ರವರು ಕೊಟ್ಟ ಒಂದು ಬಿಲ್ ತೋರಿಸಿ ಸದ್ರಿ ಅಂಗಡಿಯವರಿಂದ ಐಟಂ ನಂ 5 ರ ಸ್ವತ್ತಿಗೆ ಹಾಕಲು ಫೆನ್ಸ್ ವೈರ್ ನ್ನು ಖರೀದಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾವು ಭೂಮಿಯನ್ನು ಖರೀದಿಸಿದಾಗಲೇ ಫೆನ್ಸಿಂಗ್ ಇತ್ತು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ Tax Invoice ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಅದನ್ನು ಒಪ್ಪುವುದಿಲ್ಲ ಎಂದು ತಿಳಿಸಿರುತ್ತಾರೆ . 2022 ರಲ್ಲಿ ಬೋರ್ವೆಲ್ ನ ಪೈಪ್ ಲೈನ್ ಮೇಟರಿಯಲ್ಸ್ ಗಳನ್ನು ಖರೀದಿಸಿದ ಬಗ್ಗೆ Build Tech Palimars Ltd ರವರು ಕೊಟ್ಟ ಬಿಲ್ ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಾನು ಅದನ್ನು ಇಲ್ಲಿಯವರೆಗೆ ನೋಡಿಲ್ಲ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಐಟಂ ನಂ 5 ರ ಸ್ವತ್ತಿಗೆ ಹಾಕಿರುವ ಕಾಂಪೌಂಡ್ ವಾಲ್ ನ ಫೊಟೋ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದು ಮೊದಲೇ ಇತ್ತು ಆದ್ದರಿಂದ ಫೊಟೋ ವನ್ನು ಒಪ್ಪುವುದಿಲ್ಲ ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತಿನಲ್ಲಿ 55

ಲಾರಿಯಷ್ಟು ಲೋಡ್ ನಷ್ಟು ಕಲ್ಲನ್ನು ಡಂಪ್ ಮಾಡಲಾಗಿದೆ ಎಂದರೆ ಸಾಕ್ಷಿ ಸ್ವಲ್ಪ ಇತ್ತು ಎಂದು ತಿಳಿಸಿರುತ್ತಾರೆ. ಎಷ್ಟು ಲೋಡ್ ನಷ್ಟು ಕಲ್ಲನ್ನು ಹಾಕಲಾಗಿದೆ ಎಂದು ನನಗೆ ಗೊತ್ತಿಲ್ಲ. ಆದರೇ 2007 ರಲ್ಲೇ ಹಾಕಲಾಗಿದೆ ಎಂದು ತಿಳಿಸಿರುತಾರೆ . ಅವುಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ತರಿಸಿ ಹಾಕಿದ್ದರು. ಅದನ್ನು ಎಲ್ಲಿಂದ ತಂದರು ಎಂದು ನನಗೆ ಗೊತ್ತಿಲ್ಲ . ಐಟಂ ನಂ 5 ರಲ್ಲಿ ಅಳವಡಿಸಿರುವ ವಿದ್ಯುತ್ ಬೋರ್ಡ್ ನ ಆರ್ ಆರ್ ಸಂಖ್ಯೆ ನೆನಪಿಲ್ಲ . ಎಷ್ಟು ಲೋಡಿನ ವಿದ್ಯುತ್ ಚಕ್ತಿ ಅಳವಡಿಸಲಾಗಿದೆ ಎಂದು ನನಗೆ ನೆನಪಿಲ್ಲ . Electricity ಒಂದನೇ ಪ್ರತಿವಾದಿ ನನ್ನ ಅಣ್ಣ ನ ಹೆಸನರಿಲ್ಲಿ ಇದೆ ಎಂದರೆ ಸಾಕ್ಷಿ ತಾತ್ಕಲಿಕವಾಗಿ ಮಾಡಲಾಗಿತ್ತು ಎಂದು ತಿಳಿಸಿರುತ್ತಾರೆ. ವಿದ್ಯುತ್ ಚಕ್ತಿ ತಾತ್ಕಲಿಕ ಸಂಪರ್ಕವೇ ಅಥವಾ ಖಾಯಂ ಸಂಪರ್ಕವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದನೇ ಪ್ರತಿವಾದಿ ನನ್ನ ಅಣ್ಣ ಯವುದನ್ನು ತೆಗೆದುಕೊಂಡಿದ್ದಾರೆ ಎಂದು ಗೊತ್ತಿಲ್ಲ . ಖರೀದಿ ಲಗಾಯಿತು ವಿದ್ಯುತ್ ಚಕ್ತಿ ಬಿಲ್ ಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಪಾವತಿಸುತ್ತಿದ್ದಾರೆ ಎಂದರೆ ನಮ್ಮ ಕುಟುಂಬದ ಹಣದಿಂದ ಪಾವತಿಸುತಿದ್ದಾರೆ ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನನ್ನ ಅಣ್ಣ ವೈಯಕ್ತಿಕ ಖಾತೆಯ ಹಣದಿಂದ ವಿದ್ಯುತ್ ಶುಲ್ಕ ಪಾವತಿ ಆಗುತದೆ ಎಂದರೆ ಸಾಕ್ಷಿ ಎಲ್ಲಾ ಖಾತೆಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತಾರೆ . ಸಾಕ್ಷಿಗೆ ಈ ಬಗ್ಗೆ ವಿದ್ಯುತ್ ಚಕ್ತಿ ಬಿಲ್ ಗಳನ್ನು

ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಕಟ್ಟುತಿದ್ದರು ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತ್ತನ್ನು ಖರೀದಿ ಮಾಡುವಾಗಲೇ ಬೋರ್ವೆಲ್, ಟ್ಯಾಂಕ್ ಮತ್ತು ಕಾಂಪಾಂಡ್ ಹಾಕಲಾಗಿತ್ತು ಎನ್ನುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಆದರೇ ನಾನೇ ಖುದ್ದಾಗಿ ನೋಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿ ನನ್ನ ಅಣ್ಣ ಸದ್ರಿ ಸ್ವತ್ತಿಗೆ ಸಂಬಂದಪಟ್ಟಂತೆ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ಅವರು ಹೇಳಿದ್ದರು ಎಂದು ತಿಳಿಸಿರುತ್ತಾರೆ. ಸದ್ರಿ ರಿಟ್ ಅರ್ಜಿ ಸಂಖ್ಯೆ12992/2007 ಎಂದರೆ ಸರಿ. 11-02-2009 ರಂದು ಸದ್ರಿ ರಿಟ್ ಅರ್ಜಿಯಲ್ಲಿ ಒಂದನೇ ಪ್ರತಿವಾದಿ ನನ್ನ ಅಣ್ಣನ ಪರವಾಗಿ ಆದೇಶವಾಗಿದೆ ಎಂದರೆ ಸಾಕ್ಷಿ ನಾನು ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತಾರೆ. ಸಾಕ್ಷಿಗೆ ಉಪವಿಭಾಗಧಿಕಾರಿಗಳು ಕಲಂ 79 ಮತ್ತು 80 ರ ಅಡಿಯಲ್ಲಿ ನಡೆಸುತಿದ್ದ ವಿಚಾರಣೆಯನ್ನು ನಿಲ್ಲಿಸಿರುತಾರೆ ಎಂದರೆ ಸಾಕ್ಷಿ ಇದೇ ಮೊದಲನೆ ಬಾರಿಗೇ ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ . ಐಟಂ ನಂ 5 ರ ಸ್ವತಿಗೆ ಸಂಬಂದಪಟ್ಟಂತೆ ಯಾವುದಾದರೂ ಜಿಪಿಎನ್ನು ಕೊಟ್ಟಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಜಿಪಿಎ ಕಾಪಿಗಳು ಎಲ್ಲಾ ಒಂದನೇ ಪ್ರತಿವಾದಿ ನನ್ನ ಅಣ್ಣನ ಬಳಿ ಇದೆ ನನ್ನ ಬಳಿ ಇಲ್ಲ ಎಂದು ತಿಳಿಸಿರುತ್ತಾರೆ . ಜಿಪಿಎಯನ್ನು ಈ ಮೊದಲು ನೋಡಿರುತ್ತೇನೆ ಈಗ ನೆನಪಿಲ್ಲ . ಐಟಂ ನಂ 5 ರ ಸ್ವತ್ತು ಜಿಪಿಎಯಲ್ಲಿ ಒಳಗೊಂಡಿದೆಯೋ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಐಟಂ ನಂ 5 ರ ಸ್ವತ್ತಿನ ಬಗ್ಗೆ ಕೊಟ್ಟಿಲ್ಲ ಎಂದು ತಿಳಿಸಿರುತಾರೆ . ಪಾಲುಪಟ್ಟಿಯಲ್ಲಿ ಐಟಂ ನಂ 5 ರ ಸ್ವತ್ತನ್ನು

ಕಾಣಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಒಂದನೇ ಪ್ರತಿವಾದಿ ನನ್ನ ಅಣ್ಣನೇ ಎಲ್ಲಾವನ್ನು ಮಾಡಿಸಿರುತಾರೆ ನನಗೆ ಈಗ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನನ್ನ ಅಣ್ಣ ಐಟಂ ನಂ 5 ರ ಸ್ವತ್ತನ್ನು ಸ್ವಂತ ಹಣದಿಂದ ಸ್ವಂತಕ್ಕಾಗಿ ಖರೀದಿಸಿ ಅಭಿವೃದ್ದಿ ಮಾಡಿಕೊಂಡು ಬರುತಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನಮ್ಮ ಮನೆಯ ಹಣದಿಂದ ಮನೆಯ ಕುಟುಂಬದ ಸದಸ್ಯರಿಗಾಗಿ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ . ಕುಟುಂಬದ ಹಣದಿಂದ ಐಟಂ ನಂ 5 ರ ಸ್ವತ್ತನ್ನು ಖರೀದಿಸಲು ಪಾವತಿಯಾಗಿದೆ ಎನ್ನುವ ಬಗ್ಗೆ ಬಾಯಿ ಮಾತಿನ ಹೇಳಿಕೆ ಬಿಟ್ಟರೇ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅಭಿವೃದ್ದಿ ಮಾಡಿರುವುದೇ ದಾಖಲೆ ಎಂದು ತಿಳಿಸಿರುತಾರೆ . ಐಟಂ ನಂ 5 ರ ಸ್ವತ್ತಿನಲ್ಲಿ ಇದ್ದ ಅಭಿವೃದ್ದಿಗಳನ್ನು ನಮ್ಮ ಕುಟುಂಬದ ಹಣದಿಂದಲೇ ಮಾಡಲಾಗಿದೆ ಎಂದು ವಾದಪತ್ರದಲ್ಲಿ ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಖರಿದಿಸಿದ ಬಗ್ಗೆ ದಾಖಲೆ ಇಟ್ಟಿದ್ದೇವೆ ಆದರೇ ವಾದಪತ್ರದಲ್ಲಿ ಕಾಣಿಸಿಲ್ಲ . ಐಟಂ ನಂ 5 ರ ಸ್ವತ್ತು ಜಂಟಿ ಸ್ವಾದೀನದಲ್ಲಿ ಇದೆ ಎನ್ನುವ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ತಿಳಿಸಿರುತ್ತಾರೆ .ಸಾಕ್ಷಿ ಮುಂದುವರಿದು ಎಲ್ಲಾ ಒಂದನೇ ಪ್ರತಿವಾದಿ ನನ್ನ ಅಣ್ಣ  ಬಳಿ ಇದೆ ಎಂದು ತಿಳಿಸಿರುತ್ತಾರೆ.

ಒಂದನೇ ಪ್ರತಿವಾದಿ ನನ್ನ ಅಣ್ಣ ಐಟಂ ನಂ 5 ರ ಸ್ವತ್ತನ್ನು ಅನುಭವಿಸಬಾರದು ಮತ್ತು ಅಭಿವೃದ್ದಿ ಪಡಿಸಬಾರದು ಎಂದು ಅದರಲ್ಲಿ ಪಾಲು ಕೇಳುತಿದ್ದೇನೆ ಎಂದರೆ ಸರಿಯಲ್ಲ. ಕಸ್ತೂರು ಬಾ ಮೆಡಿಕಲ್ ಕಾಲೇಜಿನವರು ಒಂದನೇ ಪ್ರತಿವಾದಿ ನನ್ನ ಅಣ್ಣ ಯಾವ ಎಂಬಿಬಿಎಸ್ ನಲ್ಲಿ ಯಾವುದನ್ನು ಪಾಸ್ ಮಾಡಿದ್ದಾರೆ ಎಂದು ಸರ್ಟಿಫಿಕೇಟ್ ಕೊಟ್ಟಿರುತ್ತಾರೆ ಎಂದು ಒಂದು ದಾಖಲೆಯನ್ನು ತೋರೀಸಲಾಗಿ ಸಾಕ್ಷಿ ನಾನು ಇದೇ ಮೊದಲ ಬಾರಿಗೆ ಇದನ್ನು ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ .

ಐಟಂ ನಂ 1 ಮತ್ತು 2 ರ ಸ್ವತ್ತಿನ ಬಗ್ಗೆ ನಿಪಿ 87 ನ್ನು ಮೊದಲು ಓದಿರುತ್ತೇನೆ. ಈಗ ನೆನಪಿಲ್ಲ. ಅದರಲ್ಲಿ ಬರೆದಿರುವ ಒಕ್ಕಣೆ ಬಗ್ಗೆ ನನ್ನ ತಕಾರಾರು ಇಲ್ಲ ಆದರೇ ಸದ್ರಿ ಕ್ರಯಪತ್ರದಲ್ಲಿ ಖರೀದಿ ಮೊತ್ತವನ್ನು ಕಡಿಮೆ ಕಾಣಿಸಿರುತ್ತಾರೆ . ಐಟಂ ನಂ 1 ಮತ್ತು 2 ರ ಸ್ವತ್ತನ್ನು ನಾನು, ನನ್ನ ಅಣ್ಣ ಮತ್ತು ನನ್ನ ಮತ್ತೊಬ್ಬ ಸಹೋದರರ ಹೆಸರಿನಲ್ಲಿ ಒಟ್ಟಿಗೆ ಖರೀದಿಸಲಾಗಿತ್ತು . ಕ್ರಯಪತ್ರದಲ್ಲಿ ರೂ 28,75,000 ಕಾಣಿಸಲಾಗಿದೆ ಆದರೇ ಒಟ್ಟು 80 ಲಕ್ಷಕ್ಕೆ ಖರೀದಿಸಲಾಗಿದೆ ಎಂದು ತಿಳಿಸಿರುತ್ತಾರೆ. ಅದನ್ನು 80 ಲಕ್ಷಕ್ಕೆ ಖರೀದಿಸಲಾಗಿದೆ ಎಂದು ನನ್ನ ವಾದಪತ್ರದಲ್ಲಿ ಕಾಣಿಸಿಲ್ಲ . ಐಟಂ ನಂ 1 ಮತ್ತು 2 ರ ಸ್ವತ್ತನ್ನು 80 ಲಕ್ಷಕ್ಕೆ ಖರೀದಿಸಲಾಗಿದೆ ಇದೇ ಮೊದಲ ಬಾರಿಗೆ ಹೇಳುತಿದ್ದೀರಾ ಅಥವಾ ಬೇರೆ ಕಡೆ ಹೇಳಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರಿಗೆ ಕೇಸು ಹಾಕುವಾಗ ಹೇಳಿದ್ದೇನೆ ಎಂದು ತಿಳಿಸಿರುತ್ತಾರೆ . ಐಟಂ ನಂ 1 ಮತ್ತು 2 ರ

ಸ್ವತ್ತನ್ನು ಖರೀದಿಸಲು ರೂ 28,75,000 ಹಣವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಅವರ ಅಕ್ಸಿಸ್ ಬ್ಯಾಂಕ್ ನ ಶಾಖೆಯ ಖಾತೆಯಿಂದ 4 ಚೆಕ್ ಗಳ ಮುಖೇನ ಕೊಡಲಾಗಿದೆ ಎಂದರೆ ಸಾಕ್ಷಿ ಮನೆಯ ಹಣ ಎಲ್ಲವನ್ನು ಅವರೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಚೆಕ್ ನ ಹಣ ಪಾವತಿಯಾದ ಬಗ್ಗೆ ಅಕ್ಸಿಸ್ ಬ್ಯಾಂಕ್ ನವರು ಕೊಟ್ಟ ಸರ್ಟಿಫಿಕೇಟ್ ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಇದನ್ನು ಮೊದಲನೇ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ. ಕ್ರಯಪತ್ರದಲ್ಲಿ ವಿವರವಾಗಿ ಯಾರ ಹೆಸರಿಗೆ ಯಾವ ಚೆಕ್ ಕೊಡಲಾಗಿದೆ ಎಂದು ಕಾಣಿಸಲಾಗಿದೆ  ಎಂದರೆ ಸರಿ. 3 ಜನರ ಬಾಂಕ್ ಖಾತೆಯಲ್ಲಿ ಐಟಂ ನಂ 1 ಮತ್ತು 2 ರ ಸ್ವತ್ತನ್ನು ಖರೀದಿಸುವಾಗ ಎಷ್ಟು  ಹಣ ಇತ್ತು  ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  2020 ರವರೆಗೆ ಒಂದನೇ ಪ್ರತಿವಾದಿ ನನ್ನ ಅಣ್ಣನೇ ಎಲ್ಲವನ್ನು ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟರ್ನ್ಸ್ ನಲ್ಲಿ ನಾವು ಎಷ್ಟು ಹಣವನ್ನು ಐಟಂ ನಂ 1 ಮತ್ತು 2 ರ ಸ್ವತ್ತನ್ನು ಖರೀದಿಸುವಾಗ ಹಾಕಲಾಗಿದೆ ಎಂದು ಕಾಣಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ಕಾಣಿಸಿದ್ದೆನೋ ಇಲ್ಲವೋ ನೋಡಿಲ್ಲ . ಈ ದಾವೆಯನ್ನು ಹಾಕುವಾಗ ಯಾರು ಎಷ್ಟು ಹಣ ಹಾಕಲಾಗಿದೆ ಮತ್ತು ಯಾರ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನೋಡಿಲ್ಲ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಐಟಂ ನಂ 1 ಮತ್ತು 2 ರ ಸ್ವತ್ತನ್ನು ಖರೀದಿಸಲು ನಾನು ಎಷ್ಟು ಹಣ ಹಾಕಿದ್ದೇನೆ ಎಂದು ನನ್ನ ವಾದಪತ್ರದಲ್ಲಿ ಕಾಣಿಸಿಲ್ಲ . ಒಂದನೇ ಪ್ರತಿವಾದಿ ನನ್ನ ಅಣ್ಣ  2013-14 ರಲ್ಲಿ 23,45,000 ಆದಾಯವನ್ನು ಘೋಷಿಸಿಕೊಂಡಿದ್ದರು ಎಂದರೆ ನನಗೆ ಗೊತಿಲ್ಲ . 2014-15 ರಲ್ಲಿ 35,00,000 ಆದಾಯವನ್ನು ಘೋಷಿಸಿಕೊಂಡಿದ್ದರುಎಂದರೆ ನನಗೆ ಗೊತಿಲ್ಲ . ಸಾಕ್ಷಿಮುಂದುವರಿದು ಆದಾಯತೆರಿಗೆ

ಇಲಾಖೆಗೆ ಸಲ್ಲಿಸಬೇಕಾದರೇ ಹೇಗೆ ಬೇಕು ಹಾಗೇ ಮಾಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಆ ಎಲ್ಲಾ ಆದಾಯಗಳು ಆದಾಯ ತೆರಿಗೆ ಇಲಾಖೆಯಿಂದ ಪರಿಶೀಲಿಸಿ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ . ಐಟಂ ನಂ 1 ಮತ್ತು 2 ರ ಪ್ರತಿಫಲದ ಹಣವನ್ನು ಒಂದನೇ ಪ್ರತಿವಾದಿಗೆ ಬಂದ ಬಡ್ಡಿಯ ಹಣ ಮತ್ತು ಅವರು ಆದಾಯ ತೆರಿಗೆ ಇಲಾಖೆಗೆ ಘೋಷಿಸಿಕೊಂಡಿದ್ದ ಹಣದಿಂದ ಕೊಟ್ಟಿದಾರೆ ಎಂದರೆ ಸಾಕ್ಷಿ ಅವರಿಗೆ ಯಾವುದೇ ಆದಾಯ ಇದ್ದರೂ ಅದು ಕುಟುಂಬದ ಆದಾಯವೇ ಎಂದು ತಿಳಿಸಿರುತ್ತಾರೆ . ನನ್ನ ಆದಾಯ ಆ ಸಮಯದಲ್ಲಿ ಎಷ್ಟು ಇತ್ತು ಎಂದು ನಾನು ದಾವೆ ಹಾಕುವಾಗ ಪರಿಶೀಲಿಸಿಲ್ಲ . ನಮ್ಮ 3 ಜನರ ಹೆಸರಿನಲ್ಲಿ ಇದ್ದ Apartment 2011 ರಿಂದ 2014 ರವರೆಗೆ ನಿಪಿ 68 ರಿಂದ 72 ರವರೆಗೆ ಕಾಣಿಸಿರುವ ದಾಖಲೆಗಳ ಪ್ರಕಾರ ಮಾರಾಟ ಆಗಿದೆ ಎಂದರೆ ಸರಿ . Capital Gain ನಲ್ಲಿ ತೋರಿಸಲು ನನ್ನ ಅಣ್ಣ ಅವರ ಹಣದಿಂದ ಖರೀದಿಸಿದ್ದರೂ ಕೂಡ ನಮ್ಮ ಹೆಸರನ್ನು ಕ್ರಯಪತ್ರದಲ್ಲಿ ಕಾಣಿಸಿದ್ದಾರೆ ಎಂದರೆ ಸರಿಯಲ್ಲ . ಐಟಂ ನಂ 1 ಮತ್ತು 2 ರ ಸ್ವತ್ತು ಒಂದೇ plot ನಲ್ಲಿ ಇದೆ ಎಂದರೆ ಸರಿ . ಖರೀದಿ ಸಮಯದಲ್ಲಿ ಅದು ಖಾಲಿ ಪ್ಲಾಟ್ ಆಗಿತ್ತು ಎಂದರೆ ಸರಿ . ಆದರೇ ಮರಗಳು ಇದ್ದವು .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.

ಒ.ಎಸ್.  - 34/2020

ಪಿ.ಡಬ್ಲ್ಯು - 01